ಮಾತಲ್ಲಿ ಜಿಲ್ಲರಗುಂಟೆ, ಬರೆಯುವುದು ಜಿಲ್ಲಡಗುಂಟ. ಆಂಧ್ರ ಪ್ರದೇಶದ ಮಡಕಶಿರಾ ಮಂಡಲ್‌ನ ಜಿಲ್ಲರಗುಂಟೆ ಭಾಗದ ಬಹುಪಾಲು ಜನರ ಮನೆಭಾಷೆ ಕನ್ನಡ. ಆಚಾರ ವಿಚಾರವೆಲ್ಲಾ ಕನ್ನಡಿಗರಂತೆ; ಇರುವುದು ಮಾತ್ರ ಆಂಧ್ರದಲ್ಲಿ. ಸ್ಥಳೀಯರು ಜಿಲ್ಲರಗುಂಟೆ ಎಂದರೆ, ತೆಲುಗು ಭಾಷಿಕರು ಜಿಲ್ಲಡಗುಂಟ ಎಂದು ಕರೆಯುತ್ತಾರೆ.

ಪ್ರತಿವರ್ಷ ಡಿಸೆಂಬರ್ ತಿಂಗಳ ಮಾರ್ಗಶಿರ ಮಾಸದ ಹುಣ್ಣಿಮೆ ಸಂದರ್ಭದಲ್ಲಿ ನಡೆಯುವ ಜಿಲ್ಲರಗುಂಟೆ ಜಾತ್ರೆ ಈ ಭಾಗಕ್ಕೆಲ್ಲಾ ದೊಡ್ಡದು. ಭಕ್ತರಹಳ್ಳಿ ಮತ್ತು ಜಿಲ್ಲರಗುಂಟೆ ಎರಡೂ ಗ್ರಾಮಗಳ ಜನತೆ ಒಂದಾಗಿ ಜಾತ್ರೆ ಆಚರಿಸುವುದು ವಿಶೇಷ. ಐದು ದಿನಗಳ ಕಾಲ ನಡೆಯುವ ಈ ಜಾತ್ರೆಯ ಸಂದರ್ಭದಲ್ಲಿ ಕಾಲಿಡಲಾಗದಷ್ಟು ಜನಜಂಗುಳಿ. ಆಂಧ್ರ ಮತ್ತು ಕರ್ನಾಟಕದ ಲಕ್ಷಾಂತರ ಮಂದಿ ಭಕ್ತರು ಜಾತ್ರೆಗೆ ಬರುತ್ತಾರೆ. ಹಗಲೂ ರಾತ್ರಿ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.

ಮೊದಲ ದಿನ ಕಲ್ಯಾಣೋತ್ಸವ. ಎರಡನೆಯ ದಿನ ಹುಣ್ಣಿಮೆ. ಅವತ್ತು ಜಿಲ್ಲರಗುಂಟೆಯಲ್ಲಿ ಬ್ರಹ್ಮರಥೋತ್ಸವ. ಅದರ ಮರುದಿನ ಜಾತ್ರೆಯ ಸಂಭ್ರಮ ಜೋರು. ಆರತಿ, ಭೂತಪ್ಪಗಳ ಉತ್ಸವ ಮತ್ತು ಬೆಳ್ಳಿ ಪಲ್ಲಕ್ಕಿ ಇರುತ್ತದೆ. ನಾಲ್ಕನೆಯ ದಿನ ನರಸಿಂಹ ಸ್ವಾಮಿಯ ಹೂವಿನ ಪಲ್ಲಕ್ಕಿ ಮತ್ತು ಕೊನೆಯ ದಿನ ಆರತಿ ಇರುತ್ತದೆ.

## ಹೋಗಬೇಡ, ಇಲ್ಲೇ ಇರು ಸ್ವಾಮಿ!

500 ವರ್ಷಗಳ ಇತಿಹಾಸವಿರುವ ಭಕ್ತರಹಳ್ಳಿ ನರಸಿಂಹಸ್ವಾಮಿ ದೇವಾಲಯವನ್ನು ವಿಜಯನಗರದ ದೊರೆ ಕೃಷ್ಣದೇವರಾಯನ ಗುರುವಾಗಿದ್ದ ವ್ಯಾಸರಾಯರು ನಿರ್ಮಿಸಿದರೆಂಬ ಪ್ರತೀತಿಯಿದೆ. ಅವರು ಪ್ರತಿಷ್ಠಾಪಿಸಿದ 600 ಪ್ರಾಣದೇವರುಗಳಲ್ಲಿ ಇಲ್ಲಿನ ಆಂಜನೇಯ ಮೂರ್ತಿಯೂ ಒಂದಂತೆ.

ಜನಪದರ ಬಾಯಲ್ಲಿ ನಲಿದಾಡುವ ಕಥೆಯೇ ಬೇರೆ. ದೇಶಾಂತರ ಹೊರಟಿದ್ದ ಲಕ್ಷ್ಮೀನರಸಿಂಹ ಸ್ವಾಮಿ ಜಿಲ್ಲರಗುಂಟೆಗೆ ಬಂದ. ಅವನನ್ನು ನೋಡಿದ ಜಿಲ್ಲರಗುಂಟೆ ಆಂಜನೇಯ ಸ್ವಾಮಿ 'ನನಗೂ ಹೆಂಡತಿ ಮಕ್ಕಳು ಇಲ್ಲ; ಒಬ್ಬಂಟಿ. ನೀನು ನನ್ನ ಜೊತೆ ಇರು ಸ್ವಾಮಿ' ಎಂದು ಕೇಳಿಕೊಂಡ. 'ನನಗೆ ಮೊದಲ ಪೂಜೆ ಆಗಬೇಕು' ಎಂಬ ಷರತ್ತಿನ ಮೇಲೆ ಲಕ್ಷ್ಮೀನರಸಿಂಹ ಸ್ವಾಮಿ ಭಕ್ತರಹಳ್ಳಿಯಲ್ಲಿ ನೆಲೆ ನಿಂತ. ಹಾಗಾಗಿ ಮೊದಲು ಲಕ್ಷ್ಮೀನರಸಿಂಹ ಸ್ವಾಮಿಗೆ, ನಂತರ ಆಂಜನೇಯ ಸ್ವಾಮಿಗೆ ಆರತಿ ಮಾಡುವುದು ವಾಡಿಕೆ.

ಭಕ್ತರಹಳ್ಳಿ ನರಸಿಂಹ ಸ್ವಾಮಿ ದೇವಾಲಯದ ಗರ್ಭಗುಡಿಯ ಪ್ರವೇಶದ್ವಾರದಲ್ಲಿರುವ ಪಂಚಲೋಹದ ತಗಡಿನ ಮೇಲೆ ದಶಾವತಾರದ ಚಿತ್ರಗಳಿವೆ. ಸಾಲಿಗ್ರಾಮದ ಮೇಲೆ ಪ್ರತಿಷ್ಠಾಪನೆಗೊಂಡಿರುವ ನರಸಿಂಹಸ್ವಾಮಿಯ ಮುಖ, ಬ್ರಹ್ಮ, ವಿಷ್ಣು ಮಹೇಶ್ವರರ ಮುಖಗಳ ಸಮ್ಮಿಳನದ ರೂಪ. ಒಂದು ಬಾಯಿ, ಮೂರು ಮುಖ. ಇದೇ ದೇವಸ್ಥಾನದ ಆವರಣದಲ್ಲಿ ಕೋದಂಡರಾಮ, ದಾಸಾಂಜನೇಯ ಮತ್ತು ನಾಗ ದೇವತೆಗಳ ಏಕಶಿಲಾ ವಿಗ್ರಹಗಳಿವೆ. ಲಕ್ಷ್ಮೀನರಸಿಂಹ ದೇವಸ್ಥಾನದ ಮುಂದೆ ಕಲ್ಯಾಣೋತ್ಸವ ಮಂದಿರ ಇದೆ. ಇಲ್ಲಿ ಭಾರೀ ಗಾತ್ರದ ಲಕ್ಷ್ಮೀನರಸಿಂಹ ಮತ್ತು ಲಕ್ಷ್ಮೀದೇವಿ ಮೂರ್ತಿಗಳಿವೆ. ಹೆಡೆ ಬಿಚ್ಚಿದ ಆದಿಶೇಷ ಛತ್ರಿಯ ರೀತಿ ಲಕ್ಷ್ಮೀನರಸಿಂಹ ಮತ್ತು ಲಕ್ಷ್ಮೀದೇವಿಗೆ ನೆರಳಾಗಿ ನಿಂತಿದ್ದಾನೆ.

ಆಕರ್ಷಕ ಕಣ್ಣು, ಮೀಸೆ ಹೊಂದಿದ, ಮೂರು ನಾಮಗಳಿಂದ ಕಂಗೊಳಿಸುವ ಜಿಲ್ಲರಗುಂಟೆ ಆಂಜನೇಯ ಸ್ವಾಮಿ ಶಿಷ್ಟಾಚಾರಗಳನ್ನು ಬದಿಗೊತ್ತಿದ ದೇವರು. ಎಲ್ಲ ವರ್ಗದ ಜನ ಇಲ್ಲಿ ಪೂಜೆಗೆ ಬರುತ್ತಾರೆ. ಮೂರು ನಾಮದ ಪೂಜಾರಿಗಳು ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನದ ಹೊರಗೆ ನಿಂತು 'ತೆಂಗಿನಕಾಯಿ ಕೊಡಿ. ತೆಂಗಿನಕಾಯಿ ಕೊಡಿ' ಎಂದು ಕೂಗಿ ಕರೆಯುತ್ತಾರೆ.

## ಕಡಲೆಕಾಯಿ, ಮೆಣಸಿನಕಾಯಿ ಸೇವೆ

ಜಾತ್ರೆಗೆ ಬರುವ ಭಕ್ತಾದಿಗಳು ತಾವು ಬೆಳೆದ ಕಡಲೆಕಾಯಿ, ತೊಗರಿಕಾಯಿ, ನೆಲ್ಲು, ಮೆಣಸಿನಕಾಯಿ ಮೊದಲಾದ ಧಾನ್ಯಗಳನ್ನು ಮಡಿಲು ಕಟ್ಟಿಕೊಂಡು ಬರುವುದು ಸಾಮಾನ್ಯ. ನರಸಿಂಹ ಸ್ವಾಮಿ ದೇವಾಲಯಕ್ಕೆ ಮೂರು ಸುತ್ತು ಬರುವ ಭಕ್ತರು ತಮ್ಮ ಹೊಲದ ದವಸ ಧಾನ್ಯಗಳನ್ನು ಗುಡಿಯ ಮೇಲೆ ತೂರುತ್ತಾರೆ. ಕಾಡು ಹಂದಿ, ಕರಡಿ ಹೊಲಕ್ಕೆ ಬರದಂತೆ ರಕ್ಷಿಸಿ, ಸಮೃದ್ಧ ಸುಗ್ಗಿ ಕೊಟ್ಟಿದ್ದಕ್ಕೆ ದೇವರಿಗೆ ಕೃತಜ್ಞತೆ ಹೇಳುತ್ತಾರೆ. ಹೊಲ ಇಲ್ಲದ ಬಡವರು, ಎರಚಿದ ಬೀಜಗಳನ್ನು ಗುಡಿಸಿ ಸಂಗ್ರಹಿಸಿಕೊಳ್ಳುತ್ತಾರೆ.



ಇಲ್ಲಿ ಗಂಡುಮಕ್ಕಳಿಗೂ ಆರತಿ ಹೊರುವ ಭಾಗ್ಯ


